ದ್ವಿತೀಯ ಭಾಷೆ – ಕನ್ನಡ ಪರ್ಯಾಯ ಶೈಕ್ಷಣಿಕ ಯೋಜನೆ 2021–22 7ನೇ ತರಗತಿ

ಮಾಹೆ : ನವೆಂಬರ್ – 2021

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 01 | ನವೆಂಬರ್ ಮಾಹೆ 1ನೇ ಮತ್ತು 2ನೇ ವಾರ | ಪಾಠ–8<br>ಶ್ರಾವಣ ಬಂತು ಕಾಡಿಗೆ<br>ಕವಿ ಪರಿಚಯ: ದ.ರಾ.ಬೇಂದ್ರೆ<br>• ಕವಿ ದ,ರಾ.ಬೇಂದ್ರೆಯವರ ಪರಿಚಯವನ್ನು ಮಾಡಿಕೊಡುವರು.<br>• ಸ್ವರಭಾರಕ್ಕನುಗುಣವಾಗಿ, ರಾಗಬದ್ಧವಾಗಿ ಪದ್ಯ ಹಾಡುವುದನ್ನು ಕಲಿಯುವರು.<br>• ವಿವಿಧ ಋತುಮಾನಗಳಲ್ಲಾಗುವ ಸೌಂದರ್ಯವನ್ನು ವರ್ಣಿಸುವರು.<br>• ಶ್ರಾವಣಮಾಸದ ಪ್ರಾಕೃತಿಕ ಸಂದರ್ಭವನ್ನು ವಿವರಿಸುವರು.<br>• ಶ್ರಾವಣ ಮಾಸದ ಬಿರುಗಾಳಿಯು ಹೇಗಿರುತ್ತದೆ? ಎಂಬುದನ್ನು ಅರಿಯುವರು.<br>• ರವಿಯು ಕಾಣದಿರುವ ಬಗ್ಗೆ ತಿಳಿಯುವರು. | • ಶಿಕ್ಷಕರು ಕವಿ ಪರಿಚಯವನ್ನು ಮಾಡಿಕೊಡುವರು.<br>• ದ.ರಾ.ಬೇಂದ್ರ ರಚಿಸಿರುವ ಕೃತಿಗಳನ್ನು ಪಟ್ಟಿ ಮಾಡಿಸುವರು.<br>• ಶಿಕ್ಷಕರು ಪದ್ಯದ ಮಾದರಿ ವಾಚನ ಮಾಡಿ ಮಕ್ಕಳಿಂದ ವಾಚನ ಮಾಡಿಸುವರು.<br>• ಪದ್ಯದ ಆಶಯವನ್ನು ಹೇಳಿಸುವರು. ಸಾರಾಂಶವನ್ನು ಬರೆಸುವರು<br>• ಶಾಲೆಯ ಪರಿಸರವನ್ನು ಶ್ರಾವಣಮಾಸದ ಸಂದರ್ಭದಲ್ಲಿ ವೀಕ್ಷಿಸುವರು.<br>• ಶ್ರಾವಣಮಾಸದ ಬಿರುಗಾಳಿಯ ರೂಪದ ಬಗ್ಗೆ ಪ್ರಾತ್ಯಕ್ಷಿಕೆ ತೋರಿಸುವರು.<br>• ರವಿ ಕಾಣದಿರುವ ಸಂದರ್ಭವನ್ನು ವಿವರಿಸುವರು. | • ಕವಿಯ ಬಗ್ಗೆ ಮಾತನಾಡಲು ತಿಳಿಸುವುದು.<br>• ದ.ರಾ.ಬೇಂದ್ರೆಯವರ ಕೃತಿಗಳನ್ನು ಹೇಳಿಸುವುದು.<br>• ಪದ್ಯದ ಪದಗಳು ಮತ್ತು ಸಾಲುಗಳನ್ನು ಕಂಠಪಾಠ ಮಾಡಿರುವುದನ್ನು ಹೇಳಿಸುವುದು.<br>• ಅಭ್ಯಾಸ ಹಾಳೆ–1<br>• ಶಾಲೆಯ ಕೈತೋಟದ ಗಿಡಮರಗಳ ಬಗೆಗೆ ತಿಳಿದಿರುವುದನ್ನು ಹೇಳಿಸುವುದು.<br>• ಪ್ರಾತ್ಯಕ್ಷಿಕೆಯ ಬಗ್ಗೆ ಮಾತನಾಡಿಸುವುದು |

| | | | | |
|---|---|---|---|---|
| **02** | **3 ಮತ್ತು 4ನೇ ವಾರ** | • ಮಳೆ ಹೊಳೆಗಳ ಸಂಭ್ರಮವನ್ನು ಅರಿಯುವರು.<br>• ಊರು ಕೇರಿಗಳ ಶ್ರಾವಣದ ಸಂಭ್ರಮವನ್ನು ಅನುಭವಿಸುವರು.<br>• ಪದ್ಯದಲ್ಲಿರುವ ಗ್ರಾಂಥಿಕ ರೂಪದ ಪದಗಳನ್ನು ಗುರುತಿಸುವರು.<br>• ಮಾಸ ಮತ್ತು ಋತುಮಾನಗಳ ಬಗ್ಗೆ ತಿಳಿಯುವರು.<br>**ಪಾಠ– 9**<br>**ಕೊಳಲ ಜೋಗಿ**<br>• ಕೃತಿಕಾರರಪರಿಚಯ–ಪಂಜೆ ಮಂಗೇಶರಾಯರು.<br>• ಪಂಜೆ ಮಂಗೇಶರಾಯರ ಪರಿಚಯ ಮಾಡಿಕೊಡುವುದು.<br>• ಗ್ರಾಮೀಣ ಬದುಕಿನ ಚಿತ್ರಣವನ್ನು ಅರಿಯುವುದು.<br>• ಜೋಗಿಯ ಉಡುಗೆ ತೊಡುಗೆಗಳ ಬಗ್ಗೆ ತಿಳಿದುಕೊಳ್ಳುವುದು. | • ಸಮೀಪದಲ್ಲಿರುವ ನದಿಗೆ ಭೇಟಿ ನೀಡುವುದು. ಮತ್ತು ವೀಡಿಯೋ ಮೂಲಕ ತೋರಿಸುವುದು.<br>• ಶಾವಣ ಮಾಸದ ಸಂದರ್ಭದಲ್ಲಿ ಊರಿನ ಸುತ್ತಮುತ್ತಲಿನ ಪರಿಸರವನ್ನು ವಿದ್ಯಾರ್ಥಿಗಳು ಗಮನಿಸುವುದು.<br>• ಪದ್ಯದಲ್ಲಿರುವ ಗ್ರಾಂಥಿಕ ಪದಗಳನ್ನು ಗುರುತಿಸಿ ಬರೆಯುವ ರೀತಿ ತಿಳಿಸುವುದು.<br>• ಮಾಸ ಮತ್ತು ಋತುಗಳನ್ನು ಕಾಲ ಚಕ್ರದ ಮೂಲಕ ತಿಳಿಸುವುದು.<br>• ಶಿಕ್ಷಕರು ಕೃತಿಕಾರರ ಪರಿಚಯ ಮಾಡಿಕೊಡುವರು.<br>• ಪಂಜೆ ಮಂಗೇಶರಾಯರು ರಚಿಸಿರುವ ಕೃತಿಗಳನ್ನು ಪಟ್ಟಿ ಮಾಡಿಸುವುದು.<br>• ವೀಡಿಯೋ ಮತ್ತು ಪ್ರಾತ್ಯಕ್ಷಿಕೆ ಮೂಲಕ ಗ್ರಾಮೀಣ ಜನರ ಬದುಕಿನ ಚಿತ್ರಣವನ್ನು ಅರ್ಥ ಮಾಡಿಸುವುದು.<br>• ಜೋಗಿಯ ಉಡುಗೆ ತೊಡುಗೆಗಳನ್ನು ಗಮನಿಸುವಂತೆ ಹೇಳಿ ಅದರ ಬಗ್ಗೆ ತಿಳಿದುಕೊಳ್ಳುವುದು.<br>• ಇಲಿಯೂರಿಗೆ ಕೊಳಲೂರು ಎಂದು ಹೆಸರು ಬರಲು ಕಾರಣವಾದ ಸಂದರ್ಭವನ್ನು ತಿಳಿಸಿಕೊಡುವುದು. | • ರವಿ ಕಾಣದಿರುವ ಸಂದರ್ಭವನ್ನು ಹೇಳಿಸುವುದು.<br>• ಮಳೆ ಹೊಳೆಯ ಸೌಂದರ್ಯವನ್ನು ಹೇಳಿಸುವುದು.<br>• ಮಕ್ಕಳಿಂದ ಶ್ರಾವಣ ಸಂಭ್ರಮವನ್ನು ಹೇಳಿಸುವುದು.<br>• ಅಭ್ಯಾಸ ಹಾಳೆ–2<br>• ಮಾಸ ಮತ್ತು ಋತುಗಳನ್ನು ಪಟ್ಟಿ ಮಾಡಿಸುವರು.<br>• ಕೃತಿಕಾರರ ಬಗ್ಗೆ ಮಾತನಾಡಲು ತಿಳಿಸುವುದು.<br>• ಪಂಜೆ ಮಂಗೇಶರಾಯರು ಬರೆದಿರುವ ಕೃತಿಗಳ ಬಗ್ಗೆ ಹೇಳಿಸುವುದು.<br>• ಅಭ್ಯಾಸ ಹಾಳೆ–3<br>• ಜೋಗಿಯು ತೊಡುವ ಉಡುಗೆಗಳನ್ನು ಪಟ್ಟಿ ಮಾಡಿಸುವುದು.<br>• ಸ್ಥಳನಾಮಗಳ ಬಗೆಗೆ |

| | | | | |
|---|---|---|---|---|
| | | • ಸ್ಥಳನಾಮಗಳ ಬಗೆಗೆ ತಿಳಿಯುವುದು .<br>• ಊರಿನ ಇತಿಹಾಸವನ್ನು ಅರಿಯುವುದು.<br>• ಕೊಳಲ ಜೋಗಿ ಕಥೆಯ ನೀತಿಯನ್ನು ತಿಳಿಯುವುದು.<br>• ಗ್ರಾಮಸ್ಥರು ಕೊಳಲಜೋಗಿಯ ಮಹತ್ವ ಮತ್ತು ಚಾಣಾಕ್ಷತೆಯನ್ನು ಅರಿಯುವರು.<br>• ಕೊಳಲ ಜೋಗಿಯ ಜೀವನ ಶೈಲಿಯನ್ನು ಅರ್ಥಮಾಡಿಕೊಳ್ಳುವುದು.<br>• ಕೊಳಲ ಜೋಗಿ ಮತ್ತು ಅವನ ಸಂಗೀತ ಪ್ರಾಮುಖ್ಯತೆಯನ್ನು ಅರಿಯುವುದು.<br>• ಹೊಸಪದಗಳ ಪರಿಚಯವನ್ನು ಮಾಡಿಕೊಡುವುದು.<br>• ವಾಕ್ಯರಚನಾ ಕೌಶಲ್ಯ ಬೆಳೆಸುವುದು. | • ಹಲವಾರು ಕಥೆಗಳನ್ನು ಹೇಳುವ ಮೂಲಕ ಮಕ್ಕಳಿಂದ ನೀತಿಗಳನ್ನು ಹೇಳಿಸುವುದು.<br>• ಕಥೆಯ ಸಾರಾಂಶವನ್ನು ಕ್ರಮಬದ್ಧವಾಗಿ ವಿವರಿಸುವರು.<br>• ಜೀವನ ಚರಿತ್ರೆಯನ್ನು ನಾಟಕ ರೂಪದಲ್ಲಿ ಅಭಿನಯ ಮಾಡಿಸುವುದು.<br>• ಮಕ್ಕಳಲ್ಲಿ ಸಂಗೀತದ ಬಗೆಗೆ ಇರುವ ಆಸಕ್ತಿದಾಯಕ ವಿಚಾರಗಳನ್ನು ತಿಳಿಸಿಕೊಡುವುದು.<br>• ಪಠ್ಯದಲ್ಲಿ ಬರುವ ಹೊಸ ಪದಗಳ ಅರ್ಥವನ್ನು ಹೇಳಿಸುವುದು.<br>• ಪಠ್ಯದಲ್ಲಿ ಬರುವ ವಿರುದ್ಧ ಪದ ಬರೆಸಿ ನಂತರ ಹೇಳಿಸುವುದು.<br>• ಪಠ್ಯದ ಆಯ್ದ ಪದಗಳಿಗೆ ಸ್ವಂತವಾಕ್ಯ ರಚನಾ ಅಭ್ಯಾಸ ಮಾಡಿಸುವುದು. | ಹೇಳಿಸುವುದು.<br>• ಇಲಿಯೂರು ಕೊಳಲೂರು ಆದ ಇತಿಹಾಸವನ್ನು ಹೇಳಿಸುವುದು.<br>• ಕೆಲವೊಂದು ಪ್ರಶ್ನೆಗಳನ್ನು ನೀಡಿ ಉತ್ತರ ಪಡೆಯುವುದು.<br>• ಮಕ್ಕಳಿಂದ ಕಥೆಯ ಸಾರಾಂಶವನ್ನು ಹೇಳಿಸಿ ಬರೆಸುವುದು.<br>• ಆಯ್ದ ವಿದ್ಯಾರ್ಥಿಗಳಿಂದ ಸಂಭಾಷಣೆ ಹೇಳಿಸುವುದು.<br>• ಗಾಯನ ಆಸಕ್ತಿ ಇರುವವರಿಂದ ಹಾಡುಗಳನ್ನು ಹೇಳಿಸುವುದು.<br>• ಅಬ್ಯಾಸ ಹಾಳೆ– 4 |

ಸೂಚನೆ– ಶ್ರಾವಣ ಬಂತು ಕಾಡಿಗೆ ಪದ್ಯದ ಮಾದರಿ ವಾಚನ ಮತ್ತು ವಿವರಣೆಗಾಗಿ ಈ ಯೂಟ್ಯೂಬ್ ಲಿಂಕ್ ಬಳಸಿ; – https://youtu.be/9hJ5deyWlkQ ಮತ್ತು https://youtu.be/imcWA5lei1I

ಕೊಳಲ ಜೋಗಿ ಪಾಠದ ವಿವರಣೆಗಾಗಿ ಈ ಯೂಟ್ಯೂಬ್ ಲಿಂಕ್ ಬಳಸಿ : – https://youtu.be/CIlDC3Pm95g

## ಅಭ್ಯಾಸ ಹಾಳೆ-1

**ತರಗತಿ- 7** **ಶ್ರಾವಣ ಬಂತು ಕಾಡಿಗೆ** **ದ್ವಿತೀಯ ಭಾಷೆ- ಕನ್ನಡ**

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿ ಬರೆಯಿರಿ:-**

1. ದ.ರಾ.ಬೇಂದ್ರೆಯವರ ಅಂಕಿತನಾಮವೇನು ?

______________________________________________ .

2. ದ.ರಾ.ಬೇಂದ್ರೆಯವರ ಜನ್ಮಸ್ಥಳ ಯಾವುದು ?

______________________________________________ .

3. ಶ್ರಾವಣ ಬಂತು ಕಾಡಿಗೆ ಕವನದ ಆಕರ ಕೃತಿ ಯಾವುದು ?

______________________________________________ .

4. ಶ್ರಾವಣ ಸಂದರ್ಭದಲ್ಲಿ ರವಿ ಕಾಣದಿರಲು ಕಾರಣವೇನು ?

______________________________________________ .

5. ಶ್ರಾವಣವು ಚಂದ್ರಮಾನದ ಎಷ್ಟನೇ ತಿಂಗಳಾಗಿದೆ ?

______________________________________________ .

6. ಘಟ್ಟಕ್ಕೆ ಬಂದ ಶ್ರಾವಣ ಉಂಟು ಮಾಡಿದ ಪರಿಣಾಮಗಳೇನು ?

______________________________________________

______________________________________________

______________________________________________ .

7. ಊರು ಕೇರಿಗಳಲ್ಲಿ ಶ್ರಾವಣ ಸಂಭ್ರಮ ಹೇಗೆ ಕಾಣುತ್ತದೆ ?

______________________________________________

______________________________________________

______________________________________________

## ಅಭ್ಯಾಸ ಹಾಳೆ-2

**ತರಗತಿ- 7** **ಶ್ರಾವಣ ಬಂತು ಕಾಡಿಗೆ** **ದ್ವಿತೀಯ ಭಾಷೆ- ಕನ್ನಡ**

---

**ಅ. ಈ ಕೆಳಗಿನ ಪದಗಳಿಗೆ ಮಾದರಿಯಂತೆ ಗ್ರಾಂಥಿಕ ರೂಪ ಬರೆಯಿರಿ .**

ಮಾದರಿ- ಕುಣಿದ್ಹಾಂಗ = ಕುಣಿದ ಹಾಗೆ

1. ಬಂತು = ______________________ .
2. ಏರ್ಯಾವ = ______________________ .
3. ಉಕ್ಕತಾವ = ______________________ .
4. ಒಡೆದಾವ = ______________________ .
5. ಅದರಾಗ = ______________________ .

**ಆ. ಈ ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನುಬರೆಯಿರಿ :**

1. ಕಾಡು = ________________ .
2. ಕಡಲು = ________________ .
3. ಬಾನು = ________________ .
4. ರವಿ = ________________ .
5. ಮಳೆ = ________________ .

**ಇ. ಹೊಂದಿಸಿ ಬರೆಯಿರಿ:-**

1. ಚೈತ್ರ, ವೈಶಾಖ – ಹೇಮಂತ ಋತು.
2. ಜೇಷ್ಠ, ಆಷಾಢ – ಶರತ್ ಋತು
3. ಶ್ರಾವಣ, ಭಾದ್ರಪದ – ಗ್ರೀಷ್ಮ ಋತು
4. ಆಶ್ವೀಜ, ಕಾರ್ತಿಕ – ವಸಂತ ಋತು
5. ಮಾರ್ಗಶಿರ, ಪುಷ್ಯ – ಶಿಶಿರ ಋತು
6. ಮಾಘ, ಪಾಲ್ಗುಣ – ವರ್ಷಋತು

## ಅಭ್ಯಾಸ ಹಾಳೆ-3

**ತರಗತಿ- 7** **ಕೊಳಲ ಜೋಗಿ** **ದ್ವಿತೀಯ ಭಾಷೆ- ಕನ್ನಡ**

---

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿ ಬರೆಯಿರಿ :-**

1. ಪಂಜೆ ಮಂಗೇಶರಾಯರ ಕಾವ್ಯನಾಮ ಯಾವುದು ?

_______________________________________________

2. ಇಲಿಗಳ ಕಾಟ ತಪ್ಪಿಸಲು ಒಪ್ಪಿಕೊಂಡವರು ಯಾರು ?

_______________________________________________

3. ಇಲಿಗಳು ಹಾಸಿಗೆಯನ್ನು ಯಾವ ರೀತಿ ಹಾಳು ಮಾಡಿದವು ?

_______________________________________________

4. ಜೋಗಿಯ ಕೊಳಲ ರಾಗಕ್ಕೆ ಇಲಿಗಳು ಹೇಗೆ ಸಾಲುಗಟ್ಟಿ ಬಂದವು ?

_______________________________________________

5. ಕೊಳಲ ಜೋಗಿ ಕತೆಯ ನೀತಿ ಏನು ?

_______________________________________________

6. ಜನರು ಇಲಿಗಳನ್ನು ಹಿಡಿಯಲು ಯಾವ ಯಾವ ಪ್ರಯತ್ನಗಳನ್ನು ಮಾಡಿದರು ?

_______________________________________________

_______________________________________________

_______________________________________________ .

7. ಕೊಳಲ ಜೋಗಿಯು ಯಾವ ರೀತಿ ಜೀವನ ನಡೆಸುತ್ತಿದ್ದನು ?

_______________________________________________

_______________________________________________

_______________________________________________ .

## ಅಭ್ಯಾಸ ಹಾಳೆ-4

**ತರಗತಿ- 7** | **ಕೊಳಲ ಜೋಗಿ** | **ದ್ವಿತೀಯ ಭಾಷೆ- ಕನ್ನಡ**

---

**ಅ. ಈ ಕೆಳಗಿನ ಪದಗಳಿಗೆ ಅರ್ಥ ಬರೆಯಿರಿ :**

1. ಅರಿವೆ = ____________________
2. ಜಗಲಿ = ____________________
3. ತಿರುಕ = ____________________
4. ಇನಾಮು = ____________________

**ಆ. ಈ ಕೆಳಗಿನ ಪದಗಳನ್ನು ಸ್ವಂತವಾಕ್ಯದಲ್ಲಿ ಬಳಸಿ ಬರೆಯಿರಿ :**

1. ಕನಿಕರ = ________________________________________________ .
2. ಉತ್ಸವ = ________________________________________________
3. ನಿಶ್ಚಯಿಸು = ________________________________________________
4. ಅವಾಂತರ = ________________________________________________

**ಇ. ಈ ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ:**

1. ಉಪಾಯ X ____________________
2. ಆಸೆ X ____________________
3. ರಾತ್ರಿ X ____________________
4. ಕಷ್ಟ X ____________________

**ಈ. ಈ ಕೆಳಗಿನ ವಾಕ್ಯಗಳನ್ನು ಅರ್ಥಪೂರ್ಣವಾಗಿ ಜೋಡಿಸಿ ಬರೆಯಿರಿ :**

1. ಹೊರಗೆ ಜೋಗಿ ಊರಿನ ಕೊಳಲನ್ನು ಹೋದನು ಬಾರಿಸುತ್ತ.

________________________________________________ .

2. ಕೊಳಲ ಜೋಗಿ ಇತ್ತು ಬಿದುರಿನ ಬಳಿಯಲ್ಲಿ.

________________________________________________ .